| |
|---|
| **Deposition Sheets (RP.No.57)** **Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 573/2020**

ಪಿ.ಡಬ್ಲ್ಯು ಃ 12 ಸಿ.ಡಬ್ಲ್ಯು ಃ 21

ಸಾಕ್ಷಿದಾರನ ಹೆಸರು ಃ ರಘುನಾಥ್ ನಾಯಕ್

ತಂದೆಯ ಹೆಸರು ಃ ಕೃಷ್ಣ ನಾಯಕ್

ಪ್ರಾಯ ಃ 46 ವರ್ಷ

ಉದ್ಯೋಗ ಃ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್, ಮೆಸ್ಕಾಂ

ವಾಸ ಃ ಅಲೆವೂರು, ಉಡುಪಿ

ದಿನಾಂಕ 24-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ನಾನು 2016 ರಿಂದ 2021 ರವರೆಗೆ ಹೆಬ್ರಿ ಉಪವಿಭಾಗದಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06-01-2020 ರಂದು ಹೆಬ್ರಿ ಠಾಣೆ ಪೋಲಿಸ್ ಉಪನಿರೀಕ್ಷಕರು ಪತ್ರ ಮುಖೇನ ಹೆಬ್ರಿ ಉಪ ವಿಭಾಗ ವ್ಯಾಪ್ತಿಯ ಕಬ್ಬಿನಾಲೆ ಕುಚ್ಚೂರು ಎಂಬಲ್ಲಿ ದಿಃ 31-07-2019 ರಂದು ಎಲ್.ಟಿ. ಬ್ರೇಕ್ ಡೌನ್ ಕಾಮಗಾರಿ ನಡೆಸುವಾಗ ಆಕಸ್ಮಿಕವಾಗಿ ಉಂಟಾದ ವಿದ್ಯುತ್ ಅಪಘಾತದ ಕುರಿತು ತನಿಖೆ ನಡೆಸಲು ಮಾಹಿತಿಯನ್ನು ಕೇಳಿರುತ್ತಾರೆ. ಅದರಂತೆ ನಾನು ಕಚೇರಿಯಲ್ಲಿ ಲಭ್ಯವಿದ್ದ ದಾಖಲೆಗಳನ್ನು ಪರಿಶೀಲಿಸಿ, ಶ್ರೀನಿವಾಸ್ ಹೆಬ್ಬಾರ್ ರವರು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಕ್ಲಾಸ್ ಒನ್ ಗುತ್ತಿಗೆದಾರರು ಅವರ ಪರವಾನಿಗೆ ಸಂಖ್ಯೆ 300881 UDP ಆಗಿರುತ್ತದೆ. ದಿಃ 30-07-2019 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಶ್ರೀ ಲಕ್ಷ್ಮೀ ನಾರಾಯಣ ರವರು ಕ್ಯಾಂಪ್ ಪವರ್ ಮ್ಯಾನ್ ರಾಜು ಬೈಲಾಕುರ್ ರವರಿಗೆ ಕರೆ ಮಾಡಿ, ಲೈನ್ ಮೇಲೆ ಮರ ಬಿದ್ದು, ಕಂಬ ತುಂಡಾಗಿರುವುದಾಗಿ

ತಿಳಿಸಿರುತ್ತಾರೆ. ಅವರ ದೂರವಾಣಿ ಸಂಖ್ಯೆ 9480657933. ಸದ್ರಿ ಕಾಮಗಾರಿಗೆ ಸಾಂಕೇತಿಕ ಕಾರ್ಯಾದೇಶ ಸಂಖ್ಯೆಯನ್ನು ಪಡೆದಿದ್ದು, ಸಂಖ್ಯೆ 450846 ಆಗಿರುತ್ತದೆ. ಇದನ್ನು ಉಡುಪಿಯ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಂದ ಪಡೆಯಲಾಗಿರುತ್ತದೆ ಎಂಬ ಮಾಹಿತಿಯನ್ನು ದಾಖಲೆಗಳ ಪ್ರತಿಗಳನ್ನು ಲಗತ್ತಿಸಿ, ದೃಢಪತ್ರ ಮುಖೇನ ಮಾಹಿತಿ ನೀಡಿರುತ್ತೇನೆ.

ಸಾಕ್ಷಿಯು ಸದ್ರಿ ದೃಢೀಕರಣ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದೃಢೀಕರಣ ಪತ್ರವನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು 19(ಎ) ಎಂದು ಗುರುತಿಸಲಾಯಿತು. ನಿಪಿ-19 ಕ್ಕೆ ಲಗತ್ತಿಸಿದ ದಿಃ 01-12-2017 ರ ಕಚೇರಿ ಆದೇಶವನ್ನು ನಿಪಿ-19(ಬಿ) ಎಂದು, ದಿಃ 10-04-2015 ರ ಅಧಿಕೃತ ಜ್ಞಾಪನವನ್ನು ನಿಪಿ-19(ಸಿ) ಎಂದು, 2 ನೇ ಆರೋಪಿಯ ಪರವಾನಿಗೆಯನ್ನು ನಿಪಿ-19(ಡಿ) ಎಂದು, ವರ್ಕ್ ಓಡರ್ ನ್ನು ನಿಪಿ-19(ಇ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 2 ನೇ ಆರೋಪಿ ಪರಃ ಶ್ರೀ ಪಿ.ಎ.ಎಸ್. ವಕೀಲರಿಂದಃ

ಘಟನೆ ನಡೆದಿದೆ ಎಂದು ಹೇಳುವ ಸಮಯ ಮಳೆಗಾಲವಾಗಿರುತ್ತದೆ. ಮಳೆಗಾಲ ಸಮಯದಲ್ಲಿ ಮಿಂಚು ಹೊಡೆದರೆ ವಿದ್ಯುತ್ ವೈಯರ್ ಗಳಿಗೆ ಕರೆಂಟ್ ಹರಿದು ಶಾಕ್ ಹೊಡೆಯುವ ಸಾಧ್ಯತೆ ಇರುತ್ತದೆ. ಆ ಸಮಯದಲ್ಲಿ ವಿದ್ಯುತ್ ಕಂಬಗಳನ್ನು ಮುಟ್ಟಿದರೆ ಮೃತ ಪಡುತ್ತಾರೆ. ಘಟನೆ ಆಗಿದೆ ಎಂದು ಹೇಳುವ ಸ್ಥಳದಲ್ಲಿ ಹೈ ಟೆಂಕ್ಷನ್ ವೈಯರ್ ಮತ್ತು ಲೋ ಟೆಂಕ್ಷನ್ ವೈಯರ್ ದೂರದಲ್ಲಿದ್ದು, ಒಂದಕ್ಕೊಂದು ತಾಗಿರುವುದಿಲ್ಲ. ಒಂದು ವೇಳೆ ವಿದ್ಯುತ್ ಕಂಬದಿಂದ ಬೇರ್ಪಟ್ಟಲ್ಲಿ ಲೋ ಟೆಂಕ್ಷನ್ ವೈಯರ್ 15 ಅಡಿಗಿಂತ ದೂರ ಹೋಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಘಟನೆ ನಡೆದಿದೆ ಎಂದು ಹೇಳುವ ಸ್ಥಳದಲ್ಲಿ ಹೈ ಟೆಂಕ್ಷನ್ ವೈಯರ್ ಲೋ ಟೆಂಕ್ಷನ್ ವೈಯರ್ ನಿಂದ 80 ಮೀಟರ್ ದೂರದಲ್ಲಿತ್ತು. ಪೋಲಿಸರ ಕೋರಿಕೆಯ ಮೇರೆಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಹಾಗೂ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಉಳಿದ ಆರೋಪಿತರ ಪರಃ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ